





ಶೋ ಸೆಲೆಬ್ರಿಟಿಗಳು ಇದನ್ನು ಶೇರ್ ಮಾಡಿದ್ದಕ್ಕೆ ಅವರ ಮೇಲೂ ತಿರುಗಿಬಿದ್ದವರಿದ್ದರು. ಕಲೆ ಇರುವುದು ಕಹಿ ಸತ್ಯವನ್ನು ಹೇಳುವುದಕ್ಕೆ ಎಂದು ಬಲವಾಗಿ ನಂಬಿದ್ದೇನೆ. ಹಾಗಾಗಿ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ.

◆ **ಸಂಭ್ರಮವನ್ನು ಹಿಡಿದಿಡುವ ಟ್ರೆಂಡ್ ನಡುವೆ ದುಃಖ, ಹಿಂಸೆ, ಘೋಂಬಿ, ಕ್ರೌರ್ಯದೆಡೆಗೆ ಫೋಕಸ್ ಮಾಡಿದ್ದೀರಲ್ಲ... ಯಾಕೆ ಹೀಗೆ?**

ಬದುಕು ಸಂಭ್ರಮದ ಮೂಟೆಯಂತೂ ಅಲ್ಲವೇ ಅಲ್ಲ. ಕಷ್ಟಗಳಿವೆ. ಸುಖದ ಬೆನ್ನೆಲುಬು ಕ್ರೌರ್ಯವೇ. ಈ ಕ್ರೌರ್ಯಕ್ಕೆ ಹತ್ತಾರು ಮುಖಗಳಿವೆ. ಅದನ್ನು ಅರಿತುಕೊಳ್ಳುವುದು ಅಷ್ಟು ಸುಲಭವಲ್ಲ. ಹಾಗೆಯೇ ದುಃಖ ನಮ್ಮನ್ನು ಸಂವೇದನಾಶೀಲರನ್ನಾಗಿಸುತ್ತದೆ. ಸುಖದಲ್ಲಿ ಇರುವುದು ಬರೀ ಸ್ವಾರ್ಥವಷ್ಟೆ. ಹಾಗಾಗಿ ನಾನು ಫೋಟೊಗ್ರಫಿಯ ಮೂಲಕ ಕಥೆ ಹೇಳಲು ಹೊರಡುತ್ತೇನೆ. ಆ ಕಥೆ ಕ್ರೌರ್ಯವಾದರೆ, ಅಲ್ಲಿ ರಕ್ತ ತೋರಿಸುವುದು ಅನಿವಾರ್ಯ. ಹಾಗೆಂದು ಯಾವುದನ್ನು ಅನಗತ್ಯವಾಗಿ ತುರುಕುವುದಿಲ್ಲ.

◆ **ಫೋಟೊಗ್ರಫಿಯಲ್ಲಿ ಸೃಜನಶೀಲತೆಯ ಕೇಂದ್ರ ಯಾವುದು? ಕ್ಯಾಮೆರಾ, ಲೆನ್ಸ್, ತಾಂತ್ರಿಕ ಅರಿವು ಅಥವಾ ವಿಭಿನ್ನ ಒಳನೋಟ?**

ಚಲಿಸುತ್ತಿರುವ ಕ್ಷಣವನ್ನು ನಿರ್ದಿಷ್ಟ ಫ್ರೇಮಿನಲ್ಲಿ ನೈಜವಾಗಿ ಸೆರೆ ಹಿಡಿಯಲು ಸಾಧ್ಯವಾದರೆ ಅದೇ ಸೃಜನಶೀಲತೆ. ಆದರೆ, ಆ ಫ್ರೇಮು ಮತ್ತು ಫೋಕಸ್ ಆಗುವ ಬಗೆ ಕೇವಲ ಕ್ಯಾಮೆರಾ ಹಿಡಿದ ಮಾತ್ರಕ್ಕೆ ಸಿಕ್ಕಿಬಿಡುವುದಿಲ್ಲ. ಸೃಜನಶೀಲತೆಗೂ ಛಾಯಾಚಿತ್ರಣದ ಪರಿಕರಗಳಿಗೂ ಸಂಬಂಧವಿಲ್ಲ. ಕ್ಯಾಮೆರಾ ಕಣ್ಣಿಗೊಂದು ಭಾಷೆಯಿದೆ. ಅದನ್ನು ಅರ್ಥ ಮಾಡಿಕೊಂಡು, ಸಂವಹನ ನಡೆಸಲು ಒಳನೋಟ ಬೇಕು. ಅದನ್ನು ದಕ್ಕಿಸಿಕೊಂಡವನು ಮೊಬೈಲ್‌ನಲ್ಲಿ ಸೆರೆ ಹಿಡಿದರೂ ಅದ್ಭುತವಾಗಿಯೇ ಇರುತ್ತದೆ. ಈ ಒಳನೋಟ, ಸೃಜನಶೀಲತೆಯನ್ನು ಯಾವ ಶಾಲೆಯೂ ಕಲಿಸುವುದಿಲ್ಲ.

◆ **ವಿಭಿನ್ನ ಆಲೋಚನೆಯ ಸಿನಿಮಾಗಳಿಗೆ ಮಲಯಾಳಂ ಸಿನಿರಂಗ ಹೆಸರುವಾಸಿ. ಅಲ್ಲಿ ಕೆಲಸ ಮಾಡುವ ಪ್ರಯತ್ನ ನಡೆಸಿರುವಿರಾ?**

ಖಂಡಿತ. ಹೊಸ ಪರಿಕಲ್ಪನೆಗಳಿಗೆ ಮಾಲಿವುಡ್ ತೆರೆದುಕೊಳ್ಳುತ್ತಿರುವುದಕ್ಕೆ ಖುಷಿ ಇದೆ. ಅಲ್ಲಿ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ನನ್ನ ನೆಲದ ಕಲೆ, ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಗಳು ಹೊಸತನವನ್ನು, ಹೊಸಬರನ್ನು ಎಂದಿಗೂ ನಿರ್ಲಕ್ಷಿಸಿಲ್ಲ.

■